**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**
**ಘನ ನ್ಯಾಯಾಲಯದಲ್ಲಿ**

**ಪ್ರಕರಣ ಸಂಖ್ಯೆಃ ಎಸ್.ಸಿ 26/2020**

ದಿನಾಂಕಃ 07.09.2021
(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.)

ಪ್ರಾ.ಸಾಃ 8 (ಚಾ.ಸಾ.7 )

| | | |
|---|---|---|
| ಹೆಸರು | ಃ | ಜಿಬ್ರಾನ್ ಖಾನ್ |
| ತಂದೆಯ ಹೆಸರು | ಃ | ಮುನಾವರ್ |
| ವಯಸ್ಸು | ಃ | 22 ವರ್ಷ |
| ಉದ್ಯೋಗ | ಃ | ವೆಲ್ಡಿಂಗ್ ಕೆಲಸ |
| ವಾಸ ಸ್ಥಳ | ಃ | ಚನ್ನಪಟ್ಟಣ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನನಗೆ ಆರೋಪಿ ಸೈಯದ್ ಜಬೀರ್ ಗೊತ್ತು.

2. ಒಂದೂವರೆ ವರ್ಷದ ಹಿಂದೆ ಚನ್ನಪಟ್ಟಣ ಪೊಲೀಸ್ ಠಾಣೆಗೆ ನಾನು ಮತ್ತು ನನ್ನ ಅಣ್ಣ ಇರ್ಫಾನ್‌ನೊಂದಿಗೆ ಹೋಗಿದ್ದೆನು. ಪೊಲೀಸರು ನಮ್ಮನ್ನು ಹಾಗು ಆರೋಪಿಯನ್ನು ಜೀಪಿನಲ್ಲಿ ಶೇರವ ಹೋಟೆಲ್ ಬಳಿ ಆಟೋ ನಿಲ್ದಾಣದ ಹತ್ತಿರ ಕರೆದುಕೊಂಡು ಹೋಗಿದ್ದು, ಅಲ್ಲಿ ಚರಂಡಿಯ ಬಳಿ ಇದ್ದ ಚಾಕುವನ್ನು ಆರೋಪಿ ತೆಗೆದುಕೊಟ್ಟಿದ್ದನ್ನು ಪೊಲೀಸರು ತೆಗೆದುಕೊಂಡರು. ಚಾಕುವಿಗೆ ರಕ್ತ ಹತ್ತಿತ್ತು. ಪೊಲೀಸರು ಅಲ್ಲಿ ನಮ್ಮ ಸಹಿ ಪಡೆದು ಕಳುಹಿಸಿದರು. ಅಮಾನತ್ತು ಪಂಚನಾಮೆಯಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅಮಾನತ್ತ ಪಂಚನಾಮೆಯನ್ನು ನಿಪಿ.4 ಎಂತಲೂ ಸಾಕ್ಷಿಯ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಲಾಯಿತು. ಸದರಿ ಚಾಕು ಮುರಿದಿತ್ತು. ಅದನ್ನು ನೋಡಿದರೆ ಗುರುತಿಸಬಲ್ಲೆ.

**(ತೆರೆದ ನ್ಯಾಯಾಲಯದಲ್ಲಿ ಸೀಲಾದ ಪ್ಯಾಕೆಟ್‌ನ್ನು ತೆರೆಯಲಾಯಿತು)**

ಸಾಕ್ಷಿ ಈಗ ನ್ಯಾಯಾಲಯದ ಮುಂದಿರುವ ಚಾಕುವನ್ನು ನೋಡಿ ಗುರುತಿಸಿದ್ದು, ಚಾಕುವನ್ನು ಈಗ ಎಂ.ಓ.3 ಎಂದು ಗುರುತಿಸಲಾಯಿತು. ಪೊಲೀಸರು ಸದರಿ ಚಾಕುವನ್ನು ಬಟ್ಟೆಯಲ್ಲಿ ಸುತ್ತಿ ತೆಗೆದುಕೊಂಡು ಹೋದರು.

3. ಎಂ.ಓ.3ನ್ನು ಪ್ಯಾಕ್ ಮಾಡಿರುವ ಬಟ್ಟೆಯ ಮೇಲಿನ ಚೀಟಿಯಲ್ಲಿ ನನ್ನ ಸಹಿ ಇದೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಕೆವಿಕೆ., ವಕೀಲರಿಂದಃ</u>

4. ಆ ದಿನ ನಮ್ಮ ಕೆಲಸಕ್ಕಾಗಿ ಮಧ್ಯಾಹ್ನ 2 ಗಂಟೆ ಹೊತ್ತಿಗೆ ನಾವು ಸದರಿ ಠಾಣೆಯ ಬಳಿ ಹೋಗಿದ್ದೆವು. ಶೇರವ ಹೋಟೆಲ್ ಮೈಸೂರು - ಬೆಂಗಳೂರು ರಸ್ತೆಯ ಬಳಿಯಿರುವ ವೃತ್ತದ ಬಳಿಯಿದೆ ಅಂದರೆ ಸರಿ. ಸದರಿ ಹೋಟೆಲ್ ಅಕ್ಕ-ಪಕ್ಕ ಅಂಗಡಿಗಳು ಇವೆ ಅಂದರೆ ಸರಿ. ನಾನು ಆಟೋ ನಿಲ್ದಾಣ ಸದರಿ ಶೇರವ ಹೋಟೆಲ್‌ನ ಎದುರು ಭಾಗದಲ್ಲಿದೆ. ಸದರಿ ಆಟೋ ಸ್ಟಾಂಡ್ ಪಕ್ಕದಲ್ಲಿ ಪೊಲೀಸ್ ಚೌಕಿ ಇದೆ ಅಂದರೆ ಸರಿ. ಸದರಿ ಪೊಲೀಸ್ ಚೌಕಿಯಲ್ಲಿ ಬೆಳಗಿನಿಂದ ರಾತ್ರಿಯವರೆಗೂ ಪೊಲೀಸರು ಇರುತ್ತಾರೆ ಅಂದರೆ ಸರಿ. ಸ್ಥಳದಲ್ಲಿರುವ ಆಟೋ ನಿಲ್ದಾಣದಲ್ಲಿ ಬೆಳಗಿನಿಂದ ರಾತ್ರಿಯವರಗೂ ಒಂದಲ್ಲಾ ಒಂದು ಆಟೋ ಇರುತ್ತದೆ ಅಂದರೆ ಸರಿ.

5. ಸದರಿ ಆಟೋ ನಿಲ್ದಾಣದ ವೃತ್ತಕ್ಕೆ ಬೆಂಗಳೂರು - ಮೈಸೂರು ರಸ್ತೆ, ತಟ್ಟೆಕೆರೆಗೆ ಹೋಗುವ ರಸ್ತೆ, ಮೆಹದಿ ನಗರಕ್ಕೆ ಹೋಗುವ ರಸ್ತೆ, ಡೂಮಲೆಟ್ ವೃತ್ತಕ್ಕೆ ಹೋಗುವ ರಸ್ತೆಗಳು ಬಂದು ಸೇರುತ್ತವೆ ಅಂದರೆ ಸರಿ. ಸದರಿ ಆಟೋ ನಿಲ್ದಾಣದ ಬಳಿ ಗುಜರಿ ಅಂಗಡಿಗಳಿವೆ ಅಂದರೆ ಸರಿ.

6. ಸ್ಥಳದಲ್ಲಿ ಚಾಕುವನ್ನು ಸೀಲು ಮಾಡಿ ವಶಪಡಿಸಿಕೊಂಡಿಲ್ಲ ಅಂದರೆ ನಾನು ಸೀಲು ಮಾಡಿದ್ದನ್ನು ಗಮನಿಸಿಲ್ಲ ಎಂದು ನುಡಿದಿದ್ದಾರೆ. ಎಂ.ಓ.3ರ ಮೇಲಿರುವ ಚೀಟಿಯನ್ನು ನನ್ನ ಸಮಕ್ಷಮ ಚಾಕು ಪ್ಯಾಕ್ ಮಾಡಿರುವ ಬಟ್ಟೆಗೆ ಅಂಟಿಸಲಿಲ್ಲ ಅಂದರೆ ಸರಿ.

7. ಎಂ.ಓ.3 ಚಾಕುವನ್ನು ಪೊಲೀಸರು ಆಟೋ ನಿಲ್ದಾಣದ ಬಳಿಯ ಗುಜರಿ ಅಂಗಡಿಯಿಂದ ಪಡೆದುಕೊಂಡು ಹೋಗಿರುತ್ತಾರೆ ಅಂದರೆ ಸರಿಯಲ್ಲ. ನನ್ನನ್ನು ಪೊಲೀಸರು ಮೇಲ್ಕಂಡ ಸ್ಥಳಕ್ಕೆ ಕರೆದುಕೊಂಡು ಹೋಗಿ ಎಂ.ಓ.3 ನ್ನು ವಶಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ ಬರೆದು ಸ್ಥಳದಲ್ಲಿ ನನ್ನ ಸಹಿ ಪಡೆದಿಲ್ಲ ಅಂದರೆ ಸರಿಯಲ್ಲ. ಪೊಲೀಸ್ ಠಾಣೆಯಲ್ಲಿ ಮಹಜರಿಗೆ ಹಾಗು ಎಂ.ಓ.3 ರ ಮೇಲಿರುವ ಚೀಟಿಗೆ ನನ್ನ ಸಹಿಗಳನ್ನು ಪಡೆದುಕೊಂಡಿರುತ್ತಾರೆ ಅಂದರೆ ಸರಿಯಲ್ಲ.

8. ಎಂ.ಓ.3 ಚಾಕು ಆ ದಿನ ಚರಂಡಿಯ ಪಕ್ಕದಲ್ಲಿ ಇದ್ದಿತು. ಸದರಿ ಚಾಕು ಎಲ್ಲರಿಗೆ ಕಾಣಿಸುವಂತೆ ಬಿದ್ದಿತ್ತಾ ಅಂದರೆ ಸಾಕ್ಷಿ ಆರೋಪಿ ತೋರಿಸಿದ ನಂತರ ಕಾಣಿಸಿತು ಎಂದು ನುಡಿದಿದ್ದಾರೆ. ಆರೋಪಿ ಎಂ.ಓ.3 ಚಾಕುವನ್ನು ನನ್ನ ಸಮಕ್ಷಮ ಪೊಲೀಸರಿಗೆ ತೋರಿಸಿ ತೆಗೆದುಕೊಟ್ಟಿಲ್ಲ ಅಂದರೆ ಸರಿಯಲ್ಲ.

9. ನಾನು, ಫರಾದ್ ಮತ್ತು ಮುಷಾಫೀರ್ ಸ್ನೇಹಿತರು ಅಂದರೆ ಸರಿ. ಫರಾದ್ ಮತ್ತು ಮುಷಾಫೀರ್ ಹೇಳಿಕೊಟ್ಟಂತೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**
**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ರಮಾ ಬಿ.ಜಿ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**